Mr. DEPUTY SPEAKER.—I have looked into the adjournment motion. Hunger-strikes do not form the subject matter of an adjournment motion. This is a continuing matter and therefore I cannot give my consent.

Calling Attention to matters of urgent Public Importance :

(i) *re:* Police firing in Chickmagalur during December 1969.

Sri C. M. S. SASTRY (Chickmagalur).—Sir, I rise to call the attention of the Chief Minister to a matter of urgent public importance namely the firing by the Police at Chickmagalur on 18th December 1969 and also arson loot committed by anti-social elements and indiscriminate arrests and lathi charges made by the Police on many respectable persons, like, press reporters, Government officials, etc. on 19th December 1969 and 20th December 1969.

† Sri VEERENDRA PATIL (Chief Minister). Sir, it is reported that there was an agitation by the students of Chickmagalur for reduction in rates of eatables in the hotels. Attempts were made by the Deputy Commissioner to bring about a settlement in this regard. On 17th December, 1969 stones were pelted and damage caused to glass panes of a hotel. Further trouble was prevented by prompt action by the Police. On 18th December, 1969 a big crowd gathered and in spite of advice by the authorities, the mob refused to disperse. Thereafter the Deputy Commissioner promulgated orders under section 35 of the Mysore Police Act prohibiting assembly of 5 or more persons in the town for a period of 7 days with immediate affect and the order was given wide publicity. Despite the prohibitory order the mob did not disperse and resorted to riotous behaviour. Thereafter the Police had to fire warning shots in order to disperse the mob.

In this connection, 8 cases have been registered under sections 147, 149, 332, 457, 380, 435 IPC. After investigation 2 of these cases have been charge-sheeted in the court of the Munsiff Magistrate, Chickmagalur, one for offences under section 147, 427 IPC and another for offences under section 147, 149, 457, 380, 433 and 427 IPC and taken on file as CC No. 48/70 and CC No. 78/70. In view of the fact that 2 of the cases are now *sub judice* and the other cases under investigation are closely connected with these cases, it may not be desirable for me to make any statement bearing on the facts and circumstances leading to the action taken.

In this incident however, 2 Police Sub-Inspectors, 2 home-guards and 5 constables received injuries and 2 police vans besides some hotels were damaged. The total damage to the public and private property was of the order of Rs. 55,000.

ಶ್ರೀ ಕೆ. ಎಚ್. ರಂಗನಾಥ್.—ಈಗ ಮಾನ್ಯ ಮುಖ್ಯಮಂತ್ರಿಗಳು ಮಾಡಿದ ಸ್ಟೇಟ್‌ಮೆಂಟನ್ನು ನಾನು ಕೇಳಿದ್ದೇನೆ. ಆಲ್ದೂರ್ ಸಬ್‌ಇನ್‌ಸ್ಪೆಕ್ಟರು ಆ ದಿವಸ ಚಿಕ್ಕಮಗಳೂರಿನಲ್ಲಿ ಮರೆಹೊಕ್ಕಂಥಾ ಕೆಲವು ಜನಗಳನ್ನೂ ಹಾಗೂ ಗೌರವಸ್ಥರಾದಂತಹ ಕೆಲವು ಜನಗಳನ್ನೂ ಸಂಯುಕ್ತ ಕರ್ನಾಟಕ ಪ್ರೆಸ್ ಕರ್ಸ್‌ಪಾಂಡೆಂಟ್ಸ್‌ನ್ನೂ ಇನ್‌ಡಿಸ್‌ಕ್ರಿಮಿನೇಟ್ ಆಗಿ ಹೊಡೆದಿದ್ದಾರೆ. ಆ ಪ್ರೆಸ್ ಕರೆಸ್‌ಪಾಂಡೆಂಟ್ಸ್ ಅವರ ಕ್ಯಾಮರಾವನ್ನು ಕಿತ್ತುಕೊಂಡು ಅವರನ್ನು ಹೊಡೆದು ಅನಾಹುತ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಲಿಲ್ಲ. ಈ ವಿಚಾರವನ್ನು ಕೂಲಂಕುಷವಾಗಿ ಸಭೆಯ ಮುಂದೆ ಇಡಬೇಕು. ಚಿಕ್ಕಮಗಳೂರಿನಲ್ಲಿ 17–18 ಘಟನೆಗಳು ನಡೆದಾಗ್ಯೂ ಕೂಡ ಮುಂದೆ ಏನಾಗಬಹುದು ಎಂಬುದು ಪೋಲೀಸಿನವರಿಗೆ ಗೊತ್ತಿದ್ದರೂ ಕೂಡ ಯಾವ ಕ್ರಮವನ್ನೂ ತೆಗೆದುಕೊಳ್ಳದೆ 19ನೇ ತಾರೀಖು ಬೆಳಿಗ್ಗೆ ಅಲ್ಲಿ ಹಾದಿ ಬೀದಿಯಲ್ಲಿ ಹೋಗ ತಕ್ಕಂಥ ಜನಗಳನ್ನು ಮನಸ್ಸಿಗೆ ಬಂದ ಹಾಗೆ ಹೊಡೆದು ಅವರನ್ನು ಲಾಕಪ್‌ನಲ್ಲಿ ಹಾಕಿ ತೊಂದರೆ ಕೊಡಿಸಿರತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರವನ್ನು ಸ್ವಲ್ಪ ವಿಸ್ತಾರವಾಗಿ ಹೇಳಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

4. 00. P. M.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದೆ, 8 ಕೇಸಸ್ ರಿಜಿಸ್ಟರ್ ಮಾಡಿದ್ದಾರೆ. ಎರಡು ಕೇಸಸ್ ಇನ್‌ವೆಸ್ಟಿಗೇಶನ್ ಮುಗಿಸಿ ಚಾರ್ಜ್ ಶೀಟ್ ಹಾಕಿದ್ದಾರೆ. ಅದು ಕೋರ್ಟಿನಲ್ಲಿ ಇರುವುದರಿಂದ ಸಬ್ ಜುಡೀಸ್ ಆಗಿರುತ್ತದೆ. ಈ ಎರಡು ವಿಚಾರಗಳೂ ಕೋರ್ಟಿನ ಮುಂದೆ ಬರುತ್ತವೆ. ಅದರ ಬಗ್ಗೆ ಈಗ ಪ್ರತ್ಯೇಕವಾದ ಸ್ಟೇಟ್‌ಮೆಂಟ್ ಕೊಡುವುದು ಅಷ್ಟು ಸೂಕ್ತವಲ್ಲ ವೆಂದು ಕಾಣುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಒಂದು ಸ್ಟೇಟ್‌ಮೆಂಟನ್ನು 17ನೇ ತಾರೀಕಿನಲ್ಲಿ ಏನು ನಡೆಯಿತು ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಆವತ್ತು ಅಲ್ಲಿ ಪೋಲೀಸರು ಮಾಡಿದ ಕೃತ್ಯ ಮತ್ತು ಹೋಟೇಲುಗಳಿಗೆ ಕಲ್ಲೆಸೆದ, ಗ್ಲಾಸ್ ಒಡೆದ ವಿಚಾರ ಹೆಚ್ಚಾಗಿ ಪ್ರಸ್ತಾಪ ಮಾಡಿಲ್ಲ. 18ನೇ ತಾರೀಕಿಗೆ ಗ್ಲಾಸ್ ಎಲ್ಲಾ ಒಡೆದುದರಿಂದ, ಹೋಟೇಲುಗಳು ಮುಚ್ಚಿದ್ದೂ ಪ್ರಸ್ತಾಪ ಮಾಡಿಲ್ಲ. ಅಲ್ಲಿ ಏನು ಗಲಾಟೆಯಾಯ್ತು ಅದನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆಗೆ 19ನೇ ತಾರೀಕಿನಂದು ಒಬ್ಬ ಪತ್ರಿಕಾಕರ್ತನನ್ನು ಒಬ್ಬ ಸಬ್ ಇನ್‌ಸ್ಪೆಕ್ಟರ್ ಎಳೆದುಕೊಂಡು ಹೋಗಿ ಅವನ ಕೈಯಲ್ಲಿದ್ದ 800 ರೂಪಾಯಿ ಬೆಲೆಬಾಳುವ ಕ್ಯಾಮರಾವನ್ನು ಪುಡಿ ಮಾಡಿದ್ದಾರೆ ಇದರ ಬಗ್ಗೆ ಚಿಕ್ಕಮಗಳೂರಿನ ಜರ್ನಲಿಸ್ಟ್ ಅಸೋಸಿಯೇಶನ್‌ನವರು ಒಂದು ತೀರ್ಮಾನವನ್ನು ತೆಗೆದುಕೊಂಡು ಮುಖ್ಯಮಂತ್ರಿಯವರಿಗೆ ಕಳಿಸಿದ್ದಾರೆ. ಇನ್ನಲ್ಲನೆ ಒಬ್ಬ ನಂಜುಂಡಸ್ವಾಮಿ ಎನ್ನತಕ್ಕ ಕಾನ್‌ಸ್ಟೇಬಲ್ ಬಹಳ ದೌರ್ಜನ್ಯದಿಂದ ವರ್ತಿಸಿದ್ದಾನೆ. ಅಲ್ಲರುವ ಗೌರವಸ್ಥರನ್ನು ಪೋಲೀಸ್ ಸ್ಟೇಶನಿಗೆ ಕರಕೊಂಡು ಹೋಗಿ ಥಳಿಸಿ, ಅನೇಕ ಜನರಿಗೆ ಕೈಕಾಲು ಮುರಿಯುವ ಹಾಗೆ ಹೊಡೆದಿದ್ದಾರೆ. ಹೀಗೆ ಪೋಲೀಸರು ಮಧುಗಿರಿಯಲ್ಲಿ ಏನು ದೌರ್ಜನ್ಯ ನಡೆಸಿದ್ದಾರೆ, ಅದಕ್ಕಿಂತ ಹೆಚ್ಚು ಚಿಕ್ಕಮಗಳೂರಿನಲ್ಲಿ ನಡೆಸಿ ಒಂದು ಪೋಲೀಸು ರಾಜ್ಯವಾಗಿದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾದ ಒಂದು ಹೇಳಿಕೆ ಕೊಡಬೇಕು. ಮತ್ತು ಆ ಪತ್ರಿಕಾಕರ್ತನಿಗೆ ಪರಿಹಾರ ಕೊಡುವಂತಹ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಇವರು ಇಷ್ಟೆಲ್ಲಾ ಹೇಳಿದ್ದಾರೆ. ಆ ಘಟನೆಯಾದ ಮೇಲೆ ನಾನು ಚಿಕ್ಕಮಗಳೂರಿಗೆ ಹೋಗಿದ್ದೆ. ಅವರು ಹೇಳಿದಂತೆ ಒಂದು ದೂರು ಅಲ್ಲಿಯು ನಾಗರೀಕರು ಮಾಡಿದ್ದಾರೆ ಮತ್ತು ಜರ್ನಲಿಸ್ಟ್ ಕೂಡ ದೂರು ಮಾಡಿದ್ದಾರೆ. ಅದರ ಮೇಲೆ ಅದನ್ನು ಸ್ಪೆಶಲ್ ಸಿ ಐ ಡಿಗೆ ಕಳಿಸಿದ್ದೇವೆ. ಸ್ಪೆಶಲ್ ಇನ್‌ವೆಸ್ಟಿಗೇಶನ್ ಮಾಡಿ ಇಷ್ಟರಲ್ಲೇ ಒಂದು ವರದಿಯನ್ನು ಸಲ್ಲಿಸಬಹುದು. ಅದು ಬಂದಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇವೆ. ಈಗ ಅದು ಸಬ್ ಜುಡಿಸ್ ಇರುತ್ತದೆ. ಅದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ಮುಂದಿನ ವಿಚಾರ Calling attention by Sri Mallappa.